ಸಮಕ್ಷಮ ಭೇಟಿಯಾದಾಗ ಅಧಿಕಾರಿಗಳಿಗೆ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ ಎಂ.ಡಿ. ಯವರಿಗೆ ನಿರ್ದೇಶನ ಕೊಡುತ್ತೇನೆ, ಮೇ ಒಳಗಾಗಿ ಕೆಲಸ ಮುಗಿಸಲು ಆದೇಶ ಕೊಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಡಿ.ಆರ್. ಪಾಟೀಲರ ಪ್ರಶ್ನೆ.

ಶ್ರೀ ಪ್ರಕಾಶ್ ಖಂಡ್ರೆ : ಸಾರ್, ಈ ಕಾಮಗಾರಿಯ ಬಗ್ಗೆ ಮಾನ್ಯ ಶ್ರೀನಿವಾಸರೆಡ್ಡಿಯವರೂ ಸಹಿತ ಬಹಳಷ್ಟು ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು : ಖಂಡ್ರೆಯವರೇ, ಎಷ್ಟು ಸಲ ಪ್ರಶ್ನೆ ಕೇಳುತ್ತೀರಿ? ಒಂದು ಪ್ರಶ್ನೆಗೆ 15 ನಿಮಿಷ ತೆಗೆದುಕೊಂಡರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಟ್ಟ ಮೇಲೂ ಮತ್ತೆ ಏನು ಕೇಳುತ್ತೀರಿ?

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಸಮಸ್ಯೆ ಇದೆ, ಆದುದರಿಂದ ಅದರ ಬಗ್ಗೆ ನಾನು ಇಲ್ಲಿ ಕೇಳುತ್ತಿದ್ದೇನೆ. ಇದರಲ್ಲಿ distribution line ಮಾಡಿಲ್ಲ. ಇದನ್ನು ಕಾರ್ಯಗತಗೊಳಿಸಿದರೆ, ಇದರಿಂದ ನೀರು ಸಿಗುವಂತಹ ವ್ಯವಸ್ಥೆ ಇಲ್ಲ. Over head tankಗೆ ನೀರು ಬರುತ್ತದೆ. ಆದರೆ over head tankನಿಂದ distribution line ಆಗಬೇಕಾಗಿದೆ. ಬೀದರ್ ಪ್ಯಾಕೇಜ್‌ನಲ್ಲಿ distribution line ಹಾಕುವುದನ್ನು include ಮಾಡಲಾಗುವುದೆಂದು ಹೇಳಲಾಗಿತ್ತು. ದಯವಿಟ್ಟು ತಾವು ಆ distribution line ಅನ್ನು ಮಾಡಿಸಿ ಕೊಟ್ಟರೆ ನಮಗೆ ಮೇ ತಿಂಗಳಲ್ಲಾದರೂ ನೀರು ಸಿಗಬಹುದಾಗಿದೆ. ಬೇಗ ಅದನ್ನು ಮಾಡಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಧರ್ಮಸಿಂಗ್ : ಅವರು ಏನು ಕೇಳಿದ್ದಾರೋ ಅದನ್ನು ಮಾಡಿಸಿಕೊಡಲಿಕ್ಕೆ ನಾನು ಆದೇಶ ಕೊಡುತ್ತೇನೆ.

ಉತ್ತರ ಕರ್ನಾಟಕದ ಪಟ್ಟಣಗಳ ಅಭಿವೃದ್ಧಿ ಯೋಜನೆ

19 (676) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಪಟ್ಟಣಗಳ ಅಭಿವೃದ್ಧಿಗಾಗಿ ತಯಾರಿಸಿದ ಯೋಜನೆಯ ಅನುಷ್ಠಾನ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯಲ್ಲಿ ಒಳಪಡಿಸಲ್ಪಡುವ ನಗರಗಳು ಯಾವುವು;

ಇ) ಯೋಜನೆಗಳ ಅನುಷ್ಠಾನಕ್ಕೆ ಹಣಕಾಸಿನ ಹೊಂದಾಣಿಕೆ ಮಾಡಲಾಗಿದೆಯೇ;

ಈ) ಒಟ್ಟು ಎಲ್ಲಾ ಪಟ್ಟಣಗಳ ಯೋಜನೆ ವೆಚ್ಚ ಎಷ್ಟು;

ಉ) ಈ ಯೋಜನೆಯನ್ನು ಎಷ್ಟು ಕಾಲಾವಕಾಶದಲ್ಲಿ ಪೂರ್ಣಗೊಳಿಸಲಾಗುವುದು;

ಊ) ಯೋಜನೆ ಪೂರ್ಣಗೊಂಡಾಗ ಇದರ ಪ್ರಯೋಜನ ಪಡೆಯುವ ನಗರಗಳ ನಾಗರೀಕರಿಗೆ ಸಿಗುವ ಸೌಲಭ್ಯಗಳು ಬೆಂಗಳೂರಿಗೆ ಹೋಲಿಸಿದಾಗ ಯಾವ ಪ್ರಮಾಣದಲ್ಲಿರುವುವು;

ಋ) ಬೆಂಗಳೂರು ನಾಗರೀಕರಿಗೂ ಇತರೆ ನಗರಗಳಲ್ಲಿ ವಾಸವಾಗಿರುವ ನಾಗರಿಕರಿಗೂ ಮೂಲಭೂತ ಸೌಲಭ್ಯ ಒದಗಿಸುವಲ್ಲಿ ತಾರತಮ್ಯವಿಟ್ಟಿರುವುದು ಏಕೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ ಅಂತಿಮ ವರದಿಯ ಕರಡು ಸಿದ್ಧವಾಗಿದ್ದು, ಅಂತಿಮ ವರದಿಯು ಮಾರ್ಚ್ 2005 ರೊಳಗಾಗಿ ಸಿದ್ಧವಾಗಲಿದೆ.

ಆ) ಈ ಯೋಜನೆಯಡಿಯಲ್ಲಿ ಕೆಳಗೆ ನಮೂದಿಸಿರುವ ಪಟ್ಟಣಗಳನ್ನು ಸೇರಿಸಲ್ಪಟ್ಟಿದೆ;

ಬಾದಾಮಿ, ಬೀದರ್, ಬಿಜಾಪುರ, ಬೆಳಗಾಂ, ಬಳ್ಳಾರಿ, ಚಾಮರಾಜನಗರ, ದಾವಣಗೆರೆ, ಗದಗ್ ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ-ಧಾರವಾಡ, ಜಮಖಂಡಿ, ಕೊಪ್ಪಳ, ರಬಕವಿ-ಬನಹಟ್ಟಿ ರಾಯಚೂರು, ರಾಣೆಬೆನ್ನೂರು, ಯಾದಗಿರ್ ಬಸವಕಲ್ಯಾಣ, ಸಿಂಧನೂರು, ಶಹಾಬಾದ್, ನಿಪ್ಪಾಣಿ ಮತ್ತು ಇಳ್ಕಲ್.

ಇ) ಯೋಜನಾ ವರದಿಯು ತಯಾರಾದವರಂತಹ ಹಣಕಾಸಿನ ಹೊಂದಾಣಿಕೆ ಮಾಡಲಾಗುತ್ತದೆ.

ಈ) ಯೋಜನೆಯು ತಯಾರಿಕೆ ಹಂತದಲ್ಲಿರುವುದರಿಂದ ಮತ್ತು ಹಣಕಾಸಿನ ಹೊಂದಾಣಿಕೆ ಆಗದಿರುವುದರಿಂದ ಒಟ್ಟು ಯೋಜನಾ ವೆಚ್ಚವನ್ನು ಅಂತಿಮಗೊಳಿಸುವುದಿಲ್ಲ.

ಉ) ಈ ಯೋಜನೆಯು ಪ್ರಾರಂಭವಾದ ನಂತರ ಸುಮಾರು 6 ವರ್ಷದಲ್ಲಿ ಪೂರ್ಣಗೊಳಿಸುವಂತೆ ಯೋಜಿಸಲಾಗಿದೆ.

ಊ) ಈ ಯೋಜನೆ ಪೂರ್ಣಗೊಂಡನಂತರ ಆಯಾ ನಗರಗಳ ನಾಗರೀಕರಿಗೆ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಮಳೆ ನೀರಿನ ಚರಂಡಿ, ರಸ್ತೆಗಳ ಅಭಿವೃದ್ಧಿ ಇತ್ಯಾದಿಗಳನ್ನು ಉತ್ತಮಗೊಳಿಸುವುದರಿಂದ ನಾಗರೀಕ ಸೌಲಭ್ಯಗಳು ಉತ್ತಮಗೊಳ್ಳುತ್ತವೆ.

ಈ ಎಲ್ಲಾ ಪಟ್ಟಣಗಳು ಬೆಂಗಳೂರಿಗೆ ಹೋಲಿಸಿದಾಗ, ಚಿಕ್ಕದಾಗಿರುವುದರಿಂದ ಸೌಲಭ್ಯಗಳನ್ನು ತಕ್ಕ ರೀತಿಯಲ್ಲಿ ನಿಯೋಜಿಸಲಾಗಿದೆ.

ಋ) ಆಯಾ ನಗರ ಪ್ರದೇಶದ ವಿಸ್ತೀರ್ಣ ಜನಸಂಖ್ಯೆಗನುಗುಣವಾಗಿ ಮೂಲಭೂತ ಸೌಲಭ್ಯವನ್ನು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ನಗರಗಳಿಗೂ ಒದಗಿಸುವುದೇ ಸರ್ಕಾರದ ಉದ್ದೇಶವಾಗಿರುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಈ ಉತ್ತರ ಸ್ವಲ್ಪ ಮುಗುಮ್ಮಾಗಿ ಇದೆ. ಉತ್ತರ ಕರ್ನಾಟಕದ ಈ ಎಲ್ಲಾ ಪಟ್ಟಣಗಳಿಗೆ ಕುಡಿಯುವ ನೀರು, ಒಳಚರಂಡಿ, ಮಳೆ ನೀರಿನ ಚರಂಡಿ, ರಸ್ತೆ ಹಾಗೂ ಘನ ತ್ಯಾಜ್ಯ ವಸ್ತುಗಳ ಸಾಗಾಣಿಕೆ ಸಲುವಾಗಿ ಏನೊಂದು ಸೌಲಭ್ಯಗಳನ್ನು ತಾವು ನಿರ್ಮಾಣ ಮಾಡುತ್ತೀರೋ, ಅದನ್ನು ಮಾಡಿದ ಮೇಲೆ, ಬೆಂಗಳೂರಿನ ನಾಗರಿಕರಿಗೆ ಈ ವಿಷಯಗಳ ಬಗ್ಗೆ ಏನೊಂದು ಸೌಲಭ್ಯ ಸಿಗುತ್ತಿದೆಯೋ, ಆ ಮಟ್ಟದಲ್ಲಿ ಸಿಗುವ ಹಾಗೆ ನೀವು ನೋಡಿಕೊಳ್ಳಬೇಕು ಎಂದು ನಾನು ಕೇಳಿದ್ದೇನೆ. ತಾವು ಈ ಬಗ್ಗೆ ಮುಗುಮ್ಮಾಗಿ ಹೇಳುವುದು ಸರಿಯಲ್ಲ. ತಾವು definite ಆಗಿ ಹೇಳಿ. ಬೆಂಗಳೂರು citizens, ಗದಗ citizens, ಹುಬ್ಬಳ್ಳಿ ಧಾರವಾಡ citizens will be treated on par, ಎಂದು ತಾವು ದಯವಿಟ್ಟು commit ಮಾಡಬೇಕು.

ಶ್ರೀ ಎಸ್.ಆರ್. ಮೋದಿ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿಗೂ ಮತ್ತು ಉತ್ತರ ಕರ್ನಾಟಕದ ನಗರಗಳಿಗೂ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸರ್ಕಾರ ಯಾವುದೇ ವ್ಯತ್ಯಾಸ ಮಾಡುವುದಿಲ್ಲ. ಎ.ಡಿ.ಬಿ.ಯ 1, 2, 3 ಮತ್ತು 4 ಎಂಬ ಯೋಜನೆಗಳಿವೆ. ಇದರಲ್ಲಿ ಎ.ಡಿ.ಬಿ. 1 ಯೋಜನೆಯ ಕೆಲಸ ಈಗಾಗಲೇ ಮುಗಿದಿದೆ. ಎ.ಡಿ.ಬಿ. 2ರ ಕೆಲಸ ಮುಗಿಯುತ್ತಿದೆ. ಎ.ಡಿ.ಬಿ.

3ನೇ ಯೋಜನೆಯೇ NKUDP. ಈ NKUDP ಯಲ್ಲಿ ಒಂದು ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಉತ್ತರ ಕರ್ನಾಟಕಕ್ಕೆ ಯಾವ ರೀತಿಯಿಂದಲೂ ನಾವು ಕಡಿಮೆ ಖರ್ಚು ಮಾಡುವುದಿಲ್ಲ. ಎ.ಡಿ.ಬಿ. 1 ಯೋಜನೆಯಲ್ಲಿ ಈಗಾಗಲೇ 600 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದರಲ್ಲೂ ಕೂಡ ನಾವು ಪ್ರತಿ ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೆವು. ಕೊಡ್ಲಂ ಯೋಜನೆಗೆ ಸಹ 900 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಲಿದ್ದೇವೆ. ಇದರಲ್ಲೂ ಕೂಡ ಪಟ್ಟಣಕ್ಕೆ 80–90 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಸಾರ್, ತಾವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಎಂಬುದು ನನಗೆ important ಅಲ್ಲ. ಬೆಂಗಳೂರು ನಾಗರಿಕರಿಗೆ ಪ್ರತಿ ನಿತ್ಯ ಕುಡಿಯುವ ನೀರು ಎಷ್ಟು ಕೊಡುತ್ತೀರಿ? ಯಾವ ಪ್ರಮಾಣದಲ್ಲಿ ಕೊಡುತ್ತೀರೋ ಅದೇ ಪ್ರಮಾಣದಲ್ಲಿ ಉಳಿದ ನಗರಗಳಲ್ಲಿರುವಂತಹ ನಾಗರಿಕರಿಗೂ ಸಹ ಕೊಡಬೇಕು. ಈ ರೀತಿಯಾಗಬೇಕು. ಬೆಂಗಳೂರಿನಲ್ಲಿ ರೋಡ್‌ಗಳನ್ನು ಯಾವ ರೀತಿ ಮಾಡಿದ್ದೀರೋ, gutter to gutter complete carpeting ಮಾಡಿ dust proof ಮಾಡಿದಂತೆ, ಅದೇ ರೀತಿಯಲ್ಲಿ ಅಲ್ಲಿಯ ನಾಗರಿಕರಿಗೂ ಕೂಡ dust proof road ಆಗುವಂತಾಗಬೇಕು. ಇದನ್ನು ನೀವು ಮಾಡುತ್ತೀರಾ? ಅದು ಎಷ್ಟು ಕೋಟಿ ರೂಪಾಯಿಗಳಾದರೂ ಆಗಲಿ, ಇದಕ್ಕೆ ಬೇಕಾಗುವಷ್ಟು ಪೂರ್ತಿ ಹಣವನ್ನು ಲೆಕ್ಕ ಹಾಕಿ ತಾವು ಸಂಪೂರ್ಣ ಹೊಂದಾಣಿಕೆ ಮಾಡಿಕೊಂಡು ಕೊಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಅದನ್ನು ನಾವು ಮಾಡುತ್ತೇವೆ. ಬೆಂಗಳೂರಿಗೆ ನಾವೆಷ್ಟು ನೀರನ್ನು ಕೊಡುತ್ತಿದ್ದೇವೋ, NKUDP ನಲ್ಲೂ ಕೂಡ ಅದೇ ಮಟ್ಟದಲ್ಲಿ ನಾವು ನೀರು ಕೊಡಬೇಕೆಂದು ಯೋಜಿಸಿದ್ದೇವೆ. ರೋಡ್‌ಗಳ ಬಗ್ಗೆ ಹೇಳುವುದಾದರೆ, ಇಲ್ಲೂ ಸಹಿತ ನಾವು ಗುಣಮಟ್ಟದ ರೋಡ್‌ಗಳನ್ನು ನಿರ್ಮಾಣ ಮಾಡುತ್ತೇವೆ. ಈ ಮೊದಲು ಸ್ಥಳೀಯ ಸಂಸ್ಥೆಗಳು ಮಾಡಿರುವಂತಾದ್ದು ಗುಣಮಟ್ಟದ ರಸ್ತೆಗಳಾಗಿಲ್ಲ ವೈಜ್ಞಾನಿಕವಾಗಿ ಅಲ್ಲಿಯ density of the vehicle. ಅಲ್ಲಿರತಕ್ಕಂಥ ವಾತಾವರಣ ಎಲ್ಲವನ್ನೂ ನೋಡಿ, ಅಂತರರಾಷ್ಟ್ರೀಯ ಮಟ್ಟದ ಪಟ್ಟಣಗಳಲ್ಲಿ ಯಾವ ರೀತಿಯ standard ಇರುತ್ತದೋ, ಅದೇ ರೀತಿಯಲ್ಲಿ ಇಲ್ಲಿಯೂ ಸಹ ನಾವು ಮಾಡುತ್ತೇವೆ. ಇದು commitment from the government.

ಶ್ರೀ ಹಂಪನಗೌಡ ಬಾದರ್ಲಿ : ನಮ್ಮ ಸಿಂಧನೂರು ಪಟ್ಟಣವೂ ಕೂಡ NKUDP ನಲ್ಲಿ ಸೇರಿದೆ. ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ 26-27 ಪಟ್ಟಣಗಳಿಗೆ ಈ ಯೋಜನೆಯನ್ನು ಅಳವಡಿಸಿದ್ದೀರಿ. ಬಹಳ ಸಂತೋಷ. ಆದರೆ ಈ ಯೋಜನೆ ಇನ್ನೂ ಪ್ರಾರಂಭದ ಹಂತದಲ್ಲಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ರಸ್ತೆಗಳು ಸಂಪೂರ್ಣವಾಗಿ ಒಳ್ಳೆಯ ರೀತಿಯಲ್ಲಿ ಆಗುವಂತೆ ಪೂರ್ಣ ಪ್ರಮಾಣದ ಯೋಜನೆಗಳನ್ನು ರೂಪಿಸಿ ಕೈಗೆತ್ತಿಕೊಳ್ಳಬೇಕು. ಮಾನ್ಯ ಪಾಟೀಲರು ಹೇಳಿದ್ದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಜನಸಂಖ್ಯೆಯ ಆಧಾರದ ಮೇಲೆ ಕುಡಿಯುವ ನೀರನ್ನು ಒದಗಿಸುವುದನ್ನು ಒಳಗೊಂಡಂತಹ ಒಂದು ಒಳ್ಳೆಯ ಯೋಜನೆಯನ್ನು ಕೈಗೆತ್ತಿಕೊಂಡಿದ್ದೀರಿ. ಅದನ್ನು ನಾವು ಸ್ವಾಗತ

ಮಾಡುತ್ತೇವೆ. ಈ ಯೋಜನೆಯನ್ನು ತೀವ್ರಗತಿಯಲ್ಲಿ ಪ್ರಾರಂಭಿಸಲು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ಉತ್ತರ ಕರ್ನಾಟಕದ ಪಟ್ಟಣಗಳ ಬಗ್ಗೆ ಮಾನ್ಯ ಡಿ.ಆರ್. ಪಾಟೀಲರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 'ಈ ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ' ಎಂದು ಹೇಳಿದ್ದಾರೆ. ಯಾವಾಗ ಇದನ್ನು complete ಮಾಡುತ್ತೀರಿ? ಯೋಜನೆಯನ್ನು ಎಷ್ಟು ಅವಧಿಯೊಳಗೆ ತಾವು ಅನುಷ್ಠಾನ ಮಾಡುತ್ತೀರಿ? ಈ ಯೋಜನೆಯ ಅನುಷ್ಠಾನದ ಸಲುವಾಗಿ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ? ಉತ್ತರ ಕರ್ನಾಟಕದಲ್ಲಿ ಇರುವಂತಹ ಗದಗ್-ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗ, ಹುಬ್ಬಳ್ಳಿ-ಧಾರವಾಡ ಮುಂತಾದ ನಗರಗಳನ್ನು ಉಲ್ಲೇಖಿಸಿ ಅವುಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ದೊಡ್ಡ ದೊಡ್ಡ ಪಟ್ಟಣಗಳೆಲ್ಲಾ ಇವತ್ತು ಒಂದು ದೊಡ್ಡ ಹಳ್ಳಿಗಳು ಅಥವಾ ಸ್ಲಂ ಗಳಾಗಿ ಪರಿವರ್ತೀತವಾಗಿವೆ. ಇವುಗಳ ಮೂಲಭೂತವಾದ ಸೌಲಭ್ಯಗಳನ್ನು ಇಂಪ್ರೂವ್ ಮಾಡುವಂತಹ ಯಾವುದೇ ರೀತಿಯ ಯೋಜನೆ ಇರಲಿಲ್ಲ. ಅದಕ್ಕಾಗಿ ಈ ಯೋಜನೆ ಅನುಷ್ಠಾನಕ್ಕೆ ಆದಷ್ಟು ಬೇಗನೆ ನೀವು ಅವಧಿಯನ್ನು ನಿಗದಿ ಮಾಡಿ implement ಮಾಡಬೇಕಾಗುತ್ತದೆ. ಹಿಂದೆ ನವೆಂಬರ್ ತಿಂಗಳಿನಲ್ಲಿ ಪತ್ರಿಕೆಯೊಂದರಲ್ಲಿ ಒಂದು ಹೇಳಿಕೆ ಪ್ರಕಟವಾಗಿತ್ತು. ಅದೇನೆಂದರೆ,

> "Karnataka Urban Infrastructure Development and Finance Corporation which proposed for Karnataka Urban Water sector improvement project last year, the project proposes to bring round the clock water to Belgaum, Hubli-Dharwad and Gulbarga Cities by plugging leakages."

ಇದೊಂದು ಸ್ಕೀಮ್ ಇತ್ತು ಅದು ಇದರೊಳಗೆ include ಆಗುತ್ತದೋ ಅಥವಾ ಇದೊಂದು independent ಸ್ಕೀಮೋ? ಇದರೊಳಗೆ ನೀರಿ ಸರಬರಾಜು ಯೋಜನೆ ಕೂಡ ಇದೆ ಎಂದು ತಾವು ಹೇಳಿದ್ದೀರಿ. ಹುಬ್ಬಳ್ಳಿ-ಧಾರವಾಡದಂತಹ ಮಹಾನಗರದಲ್ಲಿ ಇವತ್ತು 7-10 ದಿವಸಕ್ಕೊಮ್ಮೆ ನೀರನ್ನು supply ಮಾಡುತ್ತಿದ್ದೀರಿ. 3-5 ದಿವಸಕ್ಕೊಮ್ಮೆ supply ಮಾಡುತ್ತೇವೆ ಎಂದು ಹೇಳಿದ್ದರೂ, ಅಲ್ಲಿ ಆ ರೀತಿ ಆಗಲೇ ಇಲ್ಲ. ಮಾನ್ಯ ಡಿ.ಆರ್. ಪಾಟೀಲರು ಹೇಳಿದ ಪ್ರಕಾರ ಬೆಂಗಳೂರಿನಲ್ಲಿ everyday 6-7 ತಾಸು Regular ನೀರಿನ supply ಇದೆ. ಆದರೆ ಆ ಭಾಗದಲ್ಲಿ ಆ ರೀತಿ ನೀರಿನ supply ಇಲ್ಲವೇ ಇಲ್ಲ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ಭಾಷಣ ಮಾಡುತ್ತಿದ್ದೀರೋ ಅಥವಾ ಪ್ರಶ್ನೆ ಕೇಳುತ್ತಿದ್ದೀರೋ? ಈ ತರಹ ಆದರೆ ನಾವು ಪ್ರಶ್ನೋತ್ತರ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ..... ಇದನ್ನು war-footing ಮೇಲೆ ತೆಗೆದುಕೊಳ್ಳಬೇಕು. ಅದಕ್ಕಾಗಿ ಇದಕ್ಕೊಂದು time bound ಹಾಕಿ. ಇಲ್ಲದಿದ್ದರೆ ಇದು ಸಕಾಲದಲ್ಲಿ ಮುಗಿಯುವುದಿಲ್ಲ. differences start ಆಗಿ ಬಿಡುತ್ತದೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಪಟ್ಟಣಗಳಿಗೆ 1800 ಕೋಟಿ ರೂಪಾಯಿ ಅಂದರೆ 400 ಮಿಲಿಯನ್ ಡಾಲರ್. ಇವತ್ತಿನ ರೂಪಾಯಿಯ ಮೌಲ್ಯದಲ್ಲಿ ಅದು 1800 ಕೋಟಿ ರೂಪಾಯಿಗಳಾಗುತ್ತದೆ. ಈ ಪ್ರಾಜೆಕ್ಟ್ 2005-06 ರಲ್ಲಿ ಅಂದರೆ ಈ financial year ಏಪ್ರಿಲ್ ತಿಂಗಳಿನಲ್ಲಿ ಆರಂಭವಾಗುತ್ತದೆ. ನೀರಿನ ಬಗ್ಗೆ improvement ಮಾಡುವುದರ ಕುರಿತು ಈ ಹಿಂದೆ ಪತ್ರಿಕೆಯಲ್ಲಿ ಬಂದಿರುವುದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನಾವು improvement work ಅನ್ನೂ ತೆಗೆದುಕೊಳ್ಳುತ್ತೇವೆ. ಇದು ಸಾಲದು, ಇನ್ನೂ ಸ್ವಲ್ಪ ಹೆಚ್ಚಿಗೆ ನೀರು ಬೇಕು, ಅದಕ್ಕೆ ವ್ಯವಸ್ಥೆ ಮಾಡಬೇಕೆಂದರೆ, ಅದಕ್ಕೂ ಸಹ ಪ್ರಾಜೆಕ್ಟ್‌ನಲ್ಲಿ ಅವಕಾಶ ಮಾಡುತ್ತೇವೆ.

ಶ್ರೀ ಆಲೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಪಟ್ಟಣ ಪಂಚಾಯಿತಿಗಳೂ ಕೂಡ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಕೆಲವು ಪಟ್ಟಣ ಪಂಚಾಯಿತಿಗಳಲ್ಲಿ ಕುಡಿಯಲಿಕ್ಕೆ ನೀರು ಸಹ ಸಿಗಲಾರದಂತಹ ಪರಿಸ್ಥಿತಿ ಇದೆ. ರಸ್ತೆಗಳನ್ನೂ ಸಹ ಕಾಣದಿರುವಂತಹ ಪಟ್ಟಣ ಪಂಚಾಯಿತಿಗಳೂ ಕೂಡ ನಮ್ಮ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿವೆ. ಒಳಚರಂಡಿ ಕೂಡ ಕಾಣದಿರುವಂತಹ ಪಟ್ಟಣ ಪಂಚಾಯಿತಿಗಳೂ ಸಹ ಇವೆ. ಆ ಕಾರಣದಿಂದ ಈ ಯೋಜನೆಯನ್ನು ಪಟ್ಟಣ ಪಂಚಾಯಿತಿಗಳಿಗೂ ಸಹ ಅನ್ವಯಿಸಬೇಕೆಂದು ಕೋರುತ್ತೇನೆ. ಅನ್ವಯಿಸದಿದ್ದಲ್ಲಿ ಈ ಯೋಜನೆಯನ್ನು ಪಟ್ಟಣ ಪಂಚಾಯಿತಿಗಳಿಗೂ ವಿಸ್ತರಿಸಬೇಕು. ಆ ರೀತಿ ವಿಸ್ತರಿಸದೇ ಇರುವುದಕ್ಕೆ ಕಾರಣಗಳೇನು? ಪಟ್ಟಣಗಳನ್ನಷ್ಟೇ ಏಕೆ ನೀವು ಅಭಿವೃದ್ಧಿ ಪಡಿಸುತ್ತಿದ್ದೀರಿ, ಪಟ್ಟಣ ಪಂಚಾಯಿತಿಗಳನ್ನು ನೀವ್ಯಾಕೆ ಅಭಿವೃದ್ಧಿ ಪಡಿಸುತ್ತಿಲ್ಲ? ಪಟ್ಟಣ ಪಂಚಾಯಿತಿಗಳಲ್ಲೂ ಸಹ ಈ ತರಹದ ಉತ್ತಮ ರೀತಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುತ್ತೀರಾ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಈ ಪ್ರಾಜೆಕ್ಟ್ ಅನ್ನು ಜಾರಿಗೊಳಿಸಲು ಜನಸಂಖ್ಯೆ ಕನಿಷ್ಟ 50 ಸಾವಿರವಾದರೂ ಇರಬೇಕು ಎಂಬ norms ಅನ್ನು ನಿಗದಿಪಡಿಸಿದ್ದೇವೆ. 50 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರತಕ್ಕ ಪ್ರದೇಶಗಳು ಒಂದು ವೇಳೆ ಏನಾದರೂ ಪ್ರವಾಸಿ ಕೇಂದ್ರಗಳಾಗಿದ್ದರೆ, ಅಲ್ಲಿ ಪ್ರವಾಸಿ ಉದ್ಯಮ ಇದ್ದರೆ, ಅಲ್ಲೂ ಸಹಿತ ಈ ಪ್ರಾಜೆಕ್ಟ್ ಅನ್ನು ಜಾರಿಗೊಳಿಸುತ್ತೇವೆ. ಪಟ್ಟಣ ಪಂಚಾಯಿತಿಗಳಲ್ಲಿ ಅನೇಕ ಪಟ್ಟಣಗಳು 50 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವುದರಿಂದ ಈ ಪ್ರಾಜೆಕ್ಟ್‌ನಲ್ಲಿ ಅವುಗಳು ಬರುತ್ತಿಲ್ಲ.

ಶ್ರೀ ಮಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕ ಪಟ್ಟಣಗಳ ಅಭಿವೃದ್ಧಿಗಾಗಿ ಈ ಯೋಜನೆಯನ್ನು ತಯಾರಿಸಲಾಗಿದೆ. ಬಹುಶಃ ಮಾನ್ಯ ಸಂಜುಂಡಪ್ಪನವರ ವರದಿಯ ಆಧಾರದ ಮೇಲೆ ನೀವು ಇವುದಗಳನ್ನು ಉತ್ತರ ಕರ್ನಾಟಕ ಪಟ್ಟಣಗಳೆಂದು ಕರೆಯುತ್ತಿದ್ದೀರಿ ಅನ್ನಿಸುತ್ತದೆ. ತಾವು ಈ ಯೋಜನೆಯಡಿಯಲ್ಲಿ ಚಾಮರಾಜನಗರ, ದಾವಣಗೆರೆ, ಗದಗ-ಬೆಟಗೇರಿ ಮುಂತಾದ ಎಲ್ಲಾ ಪಟ್ಟಣಗಳನ್ನೂ ಸೇರಿಸಿದ್ದೀರಿ. ಆದರೆ ಈ ಪಟ್ಟಣಗಳ ಯೋಜನೆಗಳು ಇನ್ನೂ ತಯಾರಾಗಿಲ್ಲ ಎಂದು ಹೇಳುತ್ತೀರಿ, ಇದಕ್ಕೆ ಹಣ ನಿಗಧಿಯಾಗಿಲ್ಲ ಎಂದು ತಾವು ಹೇಳುತ್ತೀರಿ. ನೀವು ಯಾವಾಗ ಹಣವನ್ನು ನಿಗದಿ ಮಾಡುವುದು? ಈ ಯೋಜನೆ ಬರುವುದು ಯಾವಾಗ?

ರಸ್ತೆಗಳಲ್ಲಿ ಇರುವ ಗುಂಡಿಗಳನ್ನು ಮುಚ್ಚಿ ಅದನ್ನು ಉತ್ತಮಗೊಳಿಸುವುದು ಯಾವಾಗ? ನೀರಿನ ವ್ಯವಸ್ಥೆ ಯಾವಾಗ ಮಾಡುತ್ತೀರಿ? ಇನ್ನೂ ಯೋಜನೆ ಬಂದಿಲ್ಲವೆಂದು ಹೇಳುತ್ತೀರಿ.

ಅಂತಿಮವಾಗಿ ನಾನು ತಮ್ಮ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇವೆ. ಡಾ: ನಂಜುಂಡಪ್ಪನವರು ವರದಿಯನ್ನು ಕೊಟ್ಟು ಎಷ್ಟು ವರ್ಷಗಳಾಯಿತು. ಈ ಡಾ: ನಂಜುಂಡಪ್ಪ ವರದಿಯನ್ನು ಸರ್ಕಾರ ಏನು ಮಾಡಿದೆ? ಡಾ: ನಂಜುಂಡಪ್ಪ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಕಾಲ ಮಿತಿ ಹಾಕಿದ್ದೀರಾ? ಯಾವ ಯಾವ ರೀತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ ಇದು ಬಹಳ ಪ್ರಮುಖವಾದ ವಿಷಯ. ಡಾ: ನಂಜುಂಡಪ್ಪ ವರದಿ ಕೈ ಬಿಟ್ಟಿದ್ದಾರೆಯೇ? ಇದನ್ನು ಅವರು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ದಯಮಾಡಿ ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿ. ಅವರಿಗೆ ಸಂಬಂಧಪಟ್ಟಿದ್ದು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಡಾ: ನಂಜುಂಡಪ್ಪ ವರದಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರುತ್ತದೆ. ಅದಕ್ಕೋಸ್ಕರ ತಮ್ಮ ಗಮನಕ್ಕೆ ತಂದು ಅವರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದನ್ನು ಬೇರೆ ಸಮಯದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಡಾ: ನಂಜುಂಡಪ್ಪ ವರದಿಯ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಸಭಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಯಾವಾಗಲೂ ಉಪ ಪ್ರಶ್ನೆ ಕೇಳುತ್ತಾರೆ. ಆ ಸಂದರ್ಭದಲ್ಲಿ ಪ್ರಶ್ನೆಗೆ ಮಧ್ಯೆ ಪ್ರವೇಶಿಸಿ ಏನೇನೋ ಕೇಳುತ್ತಿದ್ದಾರೆ. ಡಾ: ನಂಜುಂಡಪ್ಪ ವರದಿ ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ. ಡಾ: ನಂಜುಂಡಪ್ಪ ವರದಿ ಕೊಟ್ಟ ಮೇಲೆ ಇದೇ ನಮ್ಮ ಕರ್ನಾಟಕ ಸರ್ಕಾರ ಏನಿದೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಿದೆ. ಬೀದರ್‌ನಲ್ಲಿ ಪಶು ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಿದೆ. 9,600 ಕೋಟಿ ರೂಪಾಯಿ ಎಂಟು ವರ್ಷಗಳಲ್ಲಿ ಖರ್ಚು ಮಾಡಬೇಕು. ಪ್ಲ್ಯಾನಿಂಗ್ ಕಮಿಷನ್ ಮುಂದೆ ನಾವು ವಾದ ಮಾಡಿದ್ದೇವೆ. ಡಾ: ನಂಜುಂಡಪ್ಪ ವರದಿ ಪ್ರಕಾರ 9,600 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಅದರಲ್ಲಿ ಅರ್ಧ ಭಾಗದಷ್ಟು ನಮಗೆ ಕೊಡಬೇಕು. ಪ್ರತಿ ವರ್ಷ 1,260 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಪ್ಲ್ಯಾನಿಂಗ್ ಕಮಿಷನ್‌ನವರು ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಆ ಹಣ ಬರುತ್ತದೆ. ಇದು ಯಾವುದೂ ಕೂಡ ವರದಿ ಮಾತಿನ ಮೇಲೆ ಆಗುವುದಿಲ್ಲ. ಎಷ್ಟೋ ವರದಿ ತಾವು ನೋಡಿದ್ದೀರಿ, ಆದರೆ ಡಾ: ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರುವುದಕ್ಕೆ ಈ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಡಾ: ನಂಜುಂಡಪ್ಪ ವರದಿ ಆಧಾರದ ಮೇಲೆ ಇದನ್ನು ಜಾರಿಗೆ ತರುವುದಕ್ಕೆ 9,600 ಕೋಟಿ ರೂಪಾಯಿ ಬೇಕಾಗುತ್ತದೆ, ಪ್ಲಾನಿಂಗ್ ಕಮಿಷನ್‌ಗೆ ಅರ್ಧ ಕೊಡಿ ಎಂದು ನಾವು ಕೇಳಿದ್ದೇವೆ ಎಂದು ಹೇಳಿದರು, ತುಂಬಾ ಸಂತೋಷ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ, ಅಗತ್ಯ ಇದೆ, ಒತ್ತಾಯ ಮಾಡಿ ತನ್ನಿ. ಆದರೆ ಇವತ್ತು ನಿಮ್ಮ ಕಡೆಯಿಂದ ಕೆಲಸ ಪ್ರಾರಂಭ ಆಗಬೇಕು. ಅದಕ್ಕೋಸ್ಕರ ಪ್ಲಾನಿಂಗ್ ಕಮಿಷನ್

ಅಪ್ರೂವ್ ಮಾಡಿ ಕೊಡುವುದಕ್ಕೆ ಕಾಯದೆಯನ್ನು ತಂದ ತತ್‌ಕ್ಷಣ ಇದನ್ನು ಜಾರಿಗೆ ತಂದು ನಮ್ಮ ಹಣ ಖರ್ಚು ಮಾಡಿ ಕೆಲಸ ಪ್ರಾರಂಭ ಮಾಡಬಹುದು. ಆ ನಂತರ ಅವರು ಕೊಡುತ್ತಾರೆ, ಇವರು ಕೆಲಸ ಪ್ರಾರಂಭ ಮಾಡಲಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಇದನ್ನು ಅನುಷ್ಠಾನಕ್ಕೆ ತರತಕ್ಕಂತಹ ರಾಜ್ಯ ಸರ್ಕಾರ ಪ್ರತಿ ವರ್ಷ ಮಾಡತಕ್ಕಂಥದ್ದು ಇದೇ ಹಿಂದಿನ ಬಜೆಟ್‌ನಲ್ಲಿ ನಾವು ಅಳವಡಿಸಿದ್ದೆವು, ಈಗಲೂ ಕೂಡ ಅದಕ್ಕೆ ಕೊಡುವ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಯಾವ ವಿಚಾರ ಎತ್ತಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ನೀವು ಇನ್ನೂ ಸಮಾಧಾನವಾಗಲಿಲ್ಲ ಎಂದರೆ ಹೇಗೆ? ವಾಟಾಳ್ ನಾಗರಾಜ್‌ರವರಿಗೆ ಸಮಾಧಾನ ಮಾಡುವುದಕ್ಕೆ ಏನಾದರೂ ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್ : ಚಾಮರಾಜ ನಗರ, ಗದಗ-ಬೆಟಗೇರಿಯನ್ನು ಸೇರಿಸಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ; ರಸ್ತೆಗಳು ಸರಿ ಇಲ್ಲ, ವ್ಯವಸ್ಥೆ ಸರಿ ಇಲ್ಲ, ಅಧ್ವಾನವಾಗಿವೆ. ಅಲ್ಲಿ ಕಟ್ಟಡ ಸುಮ್ಮನೆ ಖಾಲಿ ಇದೆ. ಜಿಲ್ಲಾ ಪ್ರದೇಶಮಾಡಿದ್ದಾರೆ, ಇದರಿಂದ ನನಗೆ ಬಹಳ ನೋವಾಗುತ್ತಿವೆ. ನಿಮ್ಮ ಕಾಲ ಮಿತಿಯಲ್ಲಿ ಇವರು ಕೆಲಸ ಮಾಡುತ್ತಾರೆಂದು ಹೇಳಿದರೆ ಸಾಧ್ಯ. ಇಲ್ಲವೆಂದರೆ ನಿಜವಾಗಿಯೂ ನನಗೆ ಬಹಳ ನೋವಾಗುತ್ತದೆ. ಯೋಜನೆ ತಯಾರು ಮಾಡಿದ್ದೇವೆ, ಅನುಕೂಲ ಮಾಡುತ್ತಿದ್ದೇವೆ ಎಂದು ಬರೀ ಗಿಣಿ ಸಾಕುತ್ತಿದ್ದೇವೆ, ನಿಮಗೆ ಏನೂ ಆಹಾರ ಕೊಡುವುದಿಲ್ಲ ಎನ್ನುವ ತರಹ ಇದೆ. ಆದ್ದರಿಂದ ಸ್ಪಷ್ಟವಾದ ತೀರ್ಮಾನವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ವಿಷಯಾಂತರವಾಗುತ್ತದೆ, ಎಲ್ಲರೂ ಎದ್ದು ನಿಲ್ಲುತ್ತಾರೆ. ಪ್ರಶ್ನೋತ್ತರ ಬೇಕಾಗಿಲ್ಲವಾ? ನಿಗದಿತ ಅವಧಿಯಲ್ಲಿ ಪ್ರಶ್ನೋತ್ತರ ಮುಗಿಯಬಾರದಾ? ಈ ತರಹ ಆದರೆ ಸಭೆ ನಡೆಸುವುದು ಕಷ್ಟವಾಗುತ್ತದೆ. ಮಾನ್ಯ ಡಿ.ಆರ್. ಪಾಟೀಲರೇ, ನಿಮ್ಮ ಪ್ರಶ್ನೆಗೆ ಸಮರ್ಪಕವಾದ ಉತ್ತರ ಹೇಳಿದ್ದಾರೆ. ಆದ್ದರಿಂದ ನಾವು ಮುಂದಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ನಾನು ಸಭಾತ್ಯಾಗ ಮಾಡುತ್ತೇನೆ. ನಮ್ಮ ಜಿಲ್ಲೆ ಕಡೆಗಣಿಸಿದ್ದಾರೆ. ಇದು ನಮ್ಮ ಯೋಜನೆಗೆ ಸೇರಿದೆ.

ಅಧ್ಯಕ್ಷರು : ದಯಮಾಡಿ ಸಹಕರಿಸಿ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಧರ್ಮಸಿಂಗ್ : ವಾಟಾಳ್ ನಾಗರಾಜ್‌ರವರ ಚಾಮರಾಜನಗರ ಹಿಂದುಳಿದ ಪ್ರದೇಶ, ಅವರ ಜಿಲ್ಲೆಗೆ ಆದ್ಯತೆ ಕೊಡಬೇಕೆಂಬ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ ಪ್ರತಿಯೊಂದಕ್ಕೆ ನೀವು ವಾಕ್ ಔಟ್ ಮಾಡುವುದು ಸರಿಯಲ್ಲ. ಡಾ: ನಂಜುಂಡಪ್ಪ ವರದಿ ನಿಮಗೆ ಏಕೆ ಬರುತ್ತದೆ? ಎಲ್ಲಿ ರೀಜನಲ್ ಇಂಬ್ಯಾಲೆನ್ಸ್ ಇದೆ ಅಲ್ಲಿ ಮಾಡುತ್ತಾರೆ. ಮೈಸೂರು ಮಹಾರಾಜರು ಪರಂಪರೆ ಎಂದು ಹೇಳಿ ಹೇಳಿ ಪೇಟ ಹಾಕಿಕೊಂಡು ಭಾಷಣ ಮಾಡುತ್ತೀರಿ, ಚಾಮರಾಜನಗರ ಏಕೆ ಹಿಂದುಳಿಯಿತು? ಆ ಪ್ರದೇಶದಲ್ಲಿ ಸಾಕಷ್ಟು ಕೆಲಸ ಆಗಿದೆ. ನಿಮ್ಮ ಕ್ಷೇತ್ರಕ್ಕೆ ಸರ್ಕಾರ ಕುಡಿಯುವ ನೀರನ್ನು ಬೇರೆ ರೀತಿಯಲ್ಲಿ ಒದಗಿಸಿಕೊಡುತ್ತದೆ. ನಿಮ್ಮ ಬೇಡಿಕೆ ಈಡೇರಿಸುತ್ತೇವೆ. ನೀವು ಏಕೆ ವಾಕ್ ಔಟ್ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಗಳು ಚಾಮರಾಜನಗರಕ್ಕೆ ಬರಲಿ, ಇಲ್ಲ ಹಣ ಕೊಡಲಿ ಎರಡರಲ್ಲಿ ಒಂದು ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು): ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಎಲ್ಲಾ ಮುಖ್ಯ ಮಂತ್ರಿಗಳಿಗೆ ಆಹ್ವಾನ ಕೊಟ್ಟುಕೊಂಡು ಬಂದಿದ್ದಾರೆ. ಗುಂಡೂರಾವ್ ಕಾಲದಲ್ಲಿ ಆಹ್ವಾನ ಕೊಟ್ಟರು, ಅವರೂ ಹೋಗಲಿಲ್ಲ, ಜೆ.ಹೆಚ್. ಪಟೇಲರ ಕಾಲದಲ್ಲಿ ಆಹ್ವಾನ ಕೊಟ್ಟರು ಅವರೂ ಹೋಗಲಿಲ್ಲ. ವೀರಪ್ಪ ಮೊಯಿಲಿಯವರಿಗೆ ಆಹ್ವಾನ ಕೊಟ್ಟರು ಅವರೂ ಹೋಗಲಿಲ್ಲ. ಈಗ ಇವರಿಗೆ ಆಹ್ವಾನ ಕೊಡುತ್ತಿದ್ದಾರೆ. ಅವರೂ ಹೋಗುವುದಿಲ್ಲ. ಆ ಮಾತು ಬೇರೆ. ಆದರೆ ಆ ಜಾಗದ ಮಹತ್ವ ಏನಿದೆ, ಯಾವ ಮುಖ್ಯ ಮಂತ್ರಿಗಳೂ ಬರುವುದಕ್ಕೆ ತಯಾರಿಲ್ಲ. ಬೇರೆ ಮಂತ್ರಿಗಳು ಕೂಡ ಅಲ್ಲಿಗೆ ಬರುವುದಕ್ಕೆ ಹೆದರುತ್ತಾರೆ. ಅದಕ್ಕಾಗಿ ಏನಾದರೂ ಶನಿ ಇದೆಯಾ ಎಂದು ಯಾವುದಾದರೂ ಕಾಟ ಇದೆಯೇ? ಏನಿದೆ ಎಂದು ಒಂದು ಸಾರಿ ತೋರಿಸಿದರೆ ವ್ಯವಸ್ಥೆ ಮಾಡಬಹುದು.

ಶ್ರೀ ಅರಗ ಜ್ಞಾನೇಂದ್ರ : ಆ ಕ್ಷೇತ್ರದ ವಾಸ್ತು ಸರಿ ಇಲ್ಲವಂತೆ ಸ್ವಲ್ಪ ನೋಡಿ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಖರ್ಗೆಯವರು ಸಮರ್ಥರಿದ್ದಾರೆ.

ಅಧ್ಯಕ್ಷರು : ಆ ಕ್ಷೇತ್ರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೂ ಕೂಡ ಒಂದೂ ಸಮಾರಂಭಕ್ಕೆ ಬರಲಿಲ್ಲ ಎಂದು ನನಗನ್ನಿಸುತ್ತದೆ. ಪರಮ ಪವಿತ್ರವಾದ ಸ್ಥಳ, ಬಹಳ ಜನ ಇರತಕ್ಕಂತಹ ಸ್ಥಳ, ಒಳ್ಳೆಯ ವ್ಯಕ್ತಿ ಆಯ್ಕೆಯಾಗಿರತಕ್ಕಂತಹ ಸ್ಥಳ. ಆ ಸ್ಥಳಕ್ಕೆ ಬರುವುದಿಲ್ಲ ಎಂದರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಗಳು ಮಂತ್ರಿಗಳಾಗಿದ್ದಾಗ ಅಲ್ಲಿಗೆ ಬಂದಿದ್ದರು. ಭಾರೀ ವೈಭವಯುತವಾಗಿ ಮೆರವಣಿಗೆ ಮಾಡಿದ್ದೇವೆ. ಅಲ್ಲಿಗೆ ಬಂದ ಮೇಲೆ ಅವರು ಮುಖ್ಯ ಮಂತ್ರಿಗಳಾಗಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜ್‌ರವರು ಹೇಳಲಿ, ಯಾವುದಾದರೂ ಜಿಲ್ಲೆ ಅನೌನ್ಸ್ ಆದರೆ ಆ ಜಿಲ್ಲೆಗೆ ಹೋಗಿ ಅನೌನ್ಸ್ ಮಾಡುತ್ತಾರೋ, ಇಲ್ಲ ಯಾವುದಾದರೂ ಒಂದು ದೇವಸ್ಥಾನದಲ್ಲಿ ಕೂತು ಅನೌನ್ಸ್ ಮಾಡುತ್ತಾರಾ? ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದಾದರೂ ಜಿಲ್ಲೆ ಚಾಮರಾಜ ನಗರ ಜಿಲ್ಲೆ ಎಂದು ಅನೌನ್ಸ್ ಮಾಡಿದರೆ ಅದು ಮಲೆ ಮಹದೇಶ್ವರ ಬೆಟ್ಟದಲ್ಲಿ ಆಯಿತೇ ಹೊರತಾಗಿ ಚಾಮರಾಜ ನಗರಕ್ಕೆ ಹೋಗಿ ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಲೆಮಹಾದೇಶ್ವರ ಬೆಟ್ಟ ಬಹಳ ಪವಿತ್ರವಾದುದು. ಜಿಲ್ಲೆ ಆರಂಭವಾಗುವಾಗ ಅಲ್ಲಿಂದ ಆರಂಭವಾಗಲಿ ಎಂದು ಮಾಡಿದರು ಅಷ್ಟೇ ಹೊರತು, ಬೇರೇನೂ ಇಲ್ಲ. ಮಾನ್ಯ ಖರ್ಗೆಯವರಿಗೆ ಕರೆಯುತ್ತಿದ್ದೇನೆ, ಸಾರಿಗೆ ಇಲಾಖೆಯ ಒಂದು ಕಟ್ಟಡ ತಯಾರಾಗಿದೆ ತಾವು ದಯಮಾಡಿ ಬಂದು ಉದ್ಘಾಟನೆ ಮಾಡಬೇಕೆಂದು ನಾನು ಕರೆಯುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿರುವ ಹಾಗೆ ಡಿವೈಎಸ್‌ಪಿ ಪೋಲಿಸ್ ಆಫೀಸ್ ಉದ್ಘಾಟನೆ ಮಾಡಿ ಬಂದಿದ್ದೇನೆ. ಒಂದು ಕಾನ್‌ಫರೆನ್ಸ್ ಇತ್ತು, ಅದಕ್ಕೋಸ್ಕರ ಕೊಳ್ಳೆಗಾಲದಿಂದ ಚಾಮರಾಜನಗರಕ್ಕೆ ಹೋಗಿ ಬಂದಿದ್ದೆ. ನನಗೆ ಏನೂ ಆಗಲಿಲ್ಲ ಎನ್ನುವುದು ಬೇರೆ. ಆದರೆ ನೀವು ಏನು ಎಲ್ಲಾ ಮುಖ್ಯ ಮಂತ್ರಿಗಳಿಗೆ ಅಲ್ಲಿಗೆ ಬನ್ನಿ ಎಂದು ಕರೆಯುತ್ತೀರಿ. ಆ ಎಲ್ಲಾ ಮುಖ್ಯ

ಮಂತ್ರಿಗಳಿಗೆ ನೀವು ಹೇಳಿ ಕೊಟ್ಟಿದ್ದೀರಿ. ನಾನು ಕರೆಯುವುದು ಕರೆಯುತ್ತೇನೆ, ನೀವು ಬರಬೇಡಿ ಎಂದು ಹೇಳಿರುತ್ತೀರಿ. ಅದಕ್ಕೆ ಹಾಗಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಬಂದಿದ್ದರು. ಅವರಿಗೆ ವೈಭವವಾದ ಸಮಾರಂಭ ಮಾಡಿದ್ದೇವೆ. ಅದರ ಬಗ್ಗೆ ತಕ್ಕರಾರು ಇಲ್ಲ. ಯಾರೂ ಹೆದರಬೇಕಾಗಿಲ್ಲ. ಬಹಳ ಪವಿತ್ರವಾದ ಸ್ಥಳ. ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಮಹಾದೇಶ್ವರ ಬೆಟ್ಟ, ಚಾಮರಾಜ ದೇವಸ್ಥಾನ ಇಡೀ ಕರ್ನಾಟಕದ ಪವಿತ್ರವಾದ ಸ್ಥಳ. ಇಲ್ಲಿಗೆ ನೀವೆಲ್ಲರೂ ಬರಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಸನ್ಮಾನ್ಯ ಸಚಿವರು ರಾಜ್ಯದ ಎಲ್ಲಾ ನಗರದ ನಾಗರೀಕರಿಗೆ ಬೆಂಗಳೂರು ಮಟ್ಟದ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರೆ ಈ ಪ್ರಾಜೆಕ್ಟ್ ನಾವು ಕನ್‌ಸೀವ್ ಮಾಡಿದಾಗ 18 ಪಟ್ಟಣಕ್ಕೆ ಇತ್ತು, ಆಗ 400 ಮಿಲಿಯನ್ ಡಾಲರ್ ಎಂದು ಹೇಳಿದ್ದಿರಿ. ಈಗ 26 ಪಟ್ಟಣಗಳು ಹೆಚ್ಚಿಗೆ ಆಗಿವೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನೀವು ಸದನದ ಮುಂದೆ ಏನು ಭರವಸೆ ಕೊಟ್ಟಿದ್ದೀರಿ, ಆ ಭರವಸೆಯನ್ನು ಗಮನದಲ್ಲಿಟ್ಟುಕೊಂಡು ಬೇಕಾಗುವ ಎಲ್ಲಾ ಹಣಕಾಸು ಅದು ಹೆಚ್ಚಾದರೂ ಹೊಂದಿಸುತ್ತೇವೆ ಎನ್ನುವ ಒಂದು ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಪ್ರಾಜೆಕ್ಟ್ ಬಗ್ಗೆ ಹಣಕಾಸು ಕಡಿಮೆ ಮಾಡುವುದಿಲ್ಲ. ಇನ್‌ಫ್ಲೇಷನ್ ಆಗಿ ತೊಂದರೆ ಆದರೂ ಕೂಡ ಪ್ರಾಜೆಕ್ಟ್ ಮಾತ್ರ ಸರಿಯಾಗಿ ತಯಾರು ಮಾಡುತ್ತೇವೆ. ಆ ಪ್ರಕಾರ ನಾವು ಸಂಪೂರ್ಣವಾಗಿ ಮಾಡಿ ಕೊಡುತ್ತೇವೆ. ವಾಟಾಳ್ ನಾಗರಾಜ್‌ರವರು ಹೇಳಿದರು, ಅಲ್ಲಿ ಗುಣಮಟ್ಟ ಸರಿಯಾಗಿಲ್ಲ ಎಂದು, ಚಾಮರಾಜನಗರದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. 2005-06ರಲ್ಲಿ ಚಾಮರಾಜನಗರದ ಕೆಲಸ ಪ್ರಾರಂಭ ಮಾಡುತ್ತೇವೆ. ಆದ್ದರಿಂದ ಗುಣಮಟ್ಟದ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರ ಏನಾಯಿತು ಎಂದರೆ, ಟೌನ್ ಪಂಚಾಯಿತಿಗಳ ಹಣೆಬರಹ ಏನಾಯಿತು ಎಂದರೆ, ಗ್ರಾಮೀಣಾಭಿವೃದ್ಧಿಯಲ್ಲಿ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಇವರೂ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಹಾಗಾದರೆ ಟೌನ್ ಪಂಚಾಯಿತಿಗಳು ಏನು ಮಾಡುವುದು? ಅವುಗಳನ್ನು ಕೂಡ ಪಂಚಾಯಿತಿ ಎಂದಾದರೂ ಮಾಡಿ, ಅಥವಾ ಮುನಿಸಿಪಾಲಿಟಿ ಎಂದಾದರೂ ಮಾಡಿ. ಈಗ ಜನಸಂಖ್ಯೆ ಹಿಡಿದು ಟೌನ್ ಪಂಚಾಯಿತಿ ಎಂದು ಮಾಡಿ ಕುಡಿಯುವ ನೀರೂ ಇಲ್ಲ, ರಸ್ತೆಗಳು ಇಲ್ಲ, ಅಭಿವೃದ್ಧಿ ಇಲ್ಲ, ಮಾನ್ಯ ಮಂತ್ರಿಗಳು 50,000 ಕಡಿಮೆ ಇದ್ದರೆ ನಾವು ತೆಗೆದುಕೊಳ್ಳುವುದಿಲ್ಲ ಎಂದು ನೀವು ನೇರವಾಗಿ ಹೇಳಿಬಿಡಿ. ಟೌನ್ ಪಂಚಾಯಿತಿಗಳಿಗೆ ನಾಗರೀಕ ಸೌಲಭ್ಯ ಒದಗಿಸಲು ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಕೆ.ಯು.ಐ.ಡಿ.ಎಫ್.ಸಿ. ಮೂರು ಪಾಕೆಟ್‌ನ್ನು ಮಾಡಿದೆ. ಎ.ಡಿ.ಬಿ. 1, ಎ.ಡಿ.ಬಿ. 2 ಮತ್ತು ಎ.ಡಿ.ಬಿ. 3. ಈ ಮೂರು ಆದ ತಕ್ಷಣ ಸಣ್ಣ ಪಟ್ಟಣಗಳಲ್ಲಿ ನಾಲ್ಕನೇ ಹಂತದಲ್ಲಿ ಕೂಡ ಕೆಲಸವನ್ನು ನಾವು ಆರಂಭ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಯಾವಾಗ ಆರಂಭ ಮಾಡುತ್ತೀರಿ?

ಶ್ರೀ ಎಸ್.ಆರ್. ಮೋರೆ : ಈ ಮೂರೂ ಪಾಕೆಟ್‌ಗಳು ಮುಗಿಯಬೇಕಲ್ಲಾ> ಆ ಮೂರು ಪಾಕೆಟ್‌ಗಳ ಕೆಲಸಗಳು ಮುಗಿದ ನಂತರ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದು ಯಾವಾಗ ಮುಗಿಯುತ್ತದೆ ಮತ್ತು ಸಣ್ಣ ಪಟ್ಟಣಗಳಲ್ಲಿ ಕೆಲಸ ಯಾವಾಗ ಆರಂಭ ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

ಶ್ರೀ ಎಸ್.ಆರ್. ಮೋರೆ : ಅದನ್ನು ಈಗ ಹೇಳುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಈಗ ಹೇಳುವುದಿಲ್ಲ ಎಂದರೆ ಹೇಗೆ? ಐದು ವರ್ಷ ಮುಗಿದ ಮೇಲೆ ಏನ್ಮಾಡೋಣ? ಅದನ್ನೂ ಕೂಡ ತಕ್ಷಣ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಬಹಳ ತೊಂದರೆ ಇದೆ.

ಶ್ರೀ ಎಸ್.ಆರ್. ಮೋರೆ : ಪರಿಶೀಲನೆಯನ್ನು ಮಾಡುತ್ತೇವೆ.

ವಸತಿ ಮತ್ತು ಘನ ತ್ಯಾಜ್ಯ ವಸ್ತುಗಳ ವಿಲೇವಾರಿ

20 (628) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ವಸತಿ, ಘನ ತ್ಯಾಜ್ಯ ವಸ್ತುಗಳ ವಿಲೇವಾರಿ ಇನ್ನೂ ಮುಂತಾದ ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಜಮೀನನ್ನು ಸರ್ಕಾರ ಖರೀದಿಸುವಾಗ ಎರಡು ರೀತಿಯ ದರಗಳನ್ನು ನಿಗಧಿಗೊಳಿಸುವುದರಿಂದ ಬಡ ರೈತರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಸದರಿ ಉದ್ದೇಶಗಳಿಗೆ ಖಾಸಗಿಯವರ ಭೂಮಿಯನ್ನು ಸರ್ಕಾರ ಖರೀದಿಸಿ ಸದುಪಯೋಗಪಡಿಸಿಕೊಳ್ಳುವುವಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದರೆ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

1) ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಪ್ರತಿದಿನ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಸರ್ಕಾರಿ ಜಾಗ ಲಭ್ಯವಿಲ್ಲದ ಕಡೆ ಖಾಸಗಿ ಭೂ ಮಾಲೀಕರಿಂದ ಸರ್ಕಾರದ ಆದೇಶ ಸಂಖ್ಯೆ. ನಅಇ 39 ಸಿಎಸ್‌ಎಸ್ 2002, ದಿ: 2.7.2003 ರ ರೀತ್ಯಾ ಮಾರ್ಗಸೂಚಿ ಬೆಲೆ (Guidance value) ಯಲ್ಲಿ ಕೊಳ್ಳಲು ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಮಾರ್ಗಸೂಚಿ ಬೆಲೆಗಳಿಗಿಂತ ಶೇ. 20 ರಷ್ಟು ಹೆಚ್ಚುವರಿಯನ್ನು ನೀಡಿ ಖರೀದಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನೀಡಿರುವ ಅಧಿಕಾರದಂತೆ ಖರೀದಿಸಲಾಗುತ್ತಿದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಖರೀದಿಯನ್ನು ಜಮೀನಿನ ಮಾಲೀಕರೊಂದಿಗೆ ಒಡಂಬಡಿಕೆಯ ಸಹಮತಿಯ ರೀತ್ಯಾ ಕ್ರಮ ವಹಿಸುತ್ತಿರುವುದರಿಂದ ಬಡ ರೈತರಿಗೆ ತೊಂದರೆಯಾಗುವುದಿಲ್ಲ.

2. ಇಲ್ಲ.

3. ಉದ್ಭವಿಸುವುದಿಲ್ಲ.